## ಗುಜರೀ ಬಕೀಟಿನೊಂದಿಗೆ ಶಿವಾಯನಮಹ




**ಕಾವ್ಯ,** ಮಕ್ಕಳ ಸಾಹಿತ್ಯ ಹಾಗೂ ಕೃಷಿ ಸಂಬಂಧಿ ಬರಹಗಳ ಮೂಲಕ ಓದುಗರಿಗೆ ಪರಿಚಿತರಾದ ಕೃಷ್ಣಮೂರ್ತಿ ಬಿಳಿಗೆರೆ ಅವರ ಚೊಚ್ಚಿಲ ಪ್ರಬಂಧ ಸಂಕಲನ 'ಗುಜರೀ ಬಕೀಟಿನೊಂದಿಗೆ ಶಿವಾಯನಮಹ'. ಇಲ್ಲಿನ ಮೂವತ್ತೈದು ರಚನೆಗಳು ಭಾವಪ್ರಧಾನವಾಗಿದ್ದು, ಓದಿಸಿಕೊಳ್ಳುವ ಗುಣ ಹೊಂದಿವೆ. ವ್ಯಕ್ತಿ ಹಾಗೂ ಸಮಷ್ಟಿ ಆರೋಗ್ಯದ ಬಗ್ಗೆ ಕಾಳಜಿಯುಳ್ಳ ಮನಸ್ಸು ಇಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

ಕೃಷ್ಣಮೂರ್ತಿ ಅವರ ಒಟ್ಟಾರೆ ಸಾಹಿತ್ಯ, ಮನುಷ್ಯ ಹಾಗೂ ಪ್ರಕೃತಿಯೊಂದಿಗೆ ಸಂವಾದ ನಡೆಸುವಂತಹದ್ದು. ಇಲ್ಲಿನ ಪ್ರಬಂಧಗಳಲ್ಲೂ ಪ್ರಕೃತಿ ಹಾಗೂ ಮನುಷ್ಯ ಸಂಬಂಧಗಳೇ ಪ್ರಧಾನವಾಗಿವೆ. ಈ ನಿಟ್ಟಿನಲ್ಲಿ 'ಮುದ್ದೆ ಮಹಾತ್ಮೆ', 'ಭೂಮಿ ಎಂಬ ಬೀಜ', 'ಹಕ್ಕಿ ಹಿಕ್ಕೆಯ ಕರುಣೆ', 'ಒಂದು ಮಹಾಮರದ ಕೊನೆ', 'ಕಾಲದ ಮರದಲ್ಲಿ ಕಲ್ಲು ಹಣ್ಣುಗಳು', 'ಬಿಸಿಲೆಂದರೆ...' ಬರಹಗಳನ್ನು ಪ್ರಬಂಧಕಾರರ ಆಶಯಗಳ ಪ್ರಾತಿನಿಧಿಕ ಬರಹಗಳ ರೂಪದಲ್ಲಿ ನೋಡಬಹುದು. ಇನ್ನಷ್ಟು ಆಳ ಹಾಗೂ ಅಗಲ ಸಾಧ್ಯವಾಗಬಹುದಿತ್ತು ಎನ್ನುವ ಅತೃಪ್ತಿಯನ್ನೂ ಇಲ್ಲಿನ ಬರಹಗಳು ಉಳಿಸುತ್ತವೆ.

**ಲೇ: ಕೃಷ್ಣಮೂರ್ತಿ ಬಿಳಿಗೆರೆ; ಪು: 188; ಬೆ: ₹ 200; ಪ್ರ: ನಮ್ಮ ಪ್ರಕಾಶನ, ಬಿಳಿಗೆರೆ. ಫೋನ್: 9481490975.**

---

## ಕಾಡುಗೊಲ್ಲ ಬುಡಕಟ್ಟು ಕುಲಕಥನ




**ಸಮುದಾಯಗಳ** ಸಾಂಸ್ಕೃತಿಕ ಅಸ್ಮಿತೆಗಳು ಹಿನ್ನೆಲೆಗೆ ಸರಿದು, ತಾರತಮ್ಯದ ಚಹರೆಗಳು ಮುನ್ನೆಲೆಗೆ ಬರುತ್ತಿರುವ ವರ್ತಮಾನದಲ್ಲಿ, 'ಕುಲಕಥನ'ಗಳ ಅಧ್ಯಯನ ಮತ್ತು ನಿರೂಪಣೆ ಸಾಂಸ್ಕೃತಿಕ ಅಗತ್ಯವೂ ಹೌದು, ಸಾಮಾಜಿಕ ತುರ್ತೂ ಹೌದು. ಅಂಥದೊಂದು ಅಗತ್ಯ–ತುರ್ತಿನ ರೂಪದಲ್ಲಿ ಮಲ್ಲಿಕಾರ್ಜುನ ಕಲಮರಹಳ್ಳಿಯವರ 'ಕಾಡುಗೊಲ್ಲ ಬುಡಕಟ್ಟು ಕುಲಕಥನ' ಕೃತಿಗೆ ವಿಶೇಷ ಮಹತ್ವವಿದೆ.

ಪಶುಪಾಲಕ ವೃತ್ತಿಯನ್ನು ಅವಲಂಬಿಸಿದ ಕಾಡುಗೊಲ್ಲರ ಬದುಕಿನ ದ್ರವ್ಯವನ್ನು ಬಹು ಸೂಕ್ಷ್ಮವಾಗಿ ಮಲ್ಲಿಕಾರ್ಜುನ ಅವರು ನಿರೂಪಿಸಿದ್ದಾರೆ. ಸಮುದಾಯದ ಸಾಂಸ್ಕೃತಿಕ ಪರಂಪರೆ, ಮೌಖಿಕ ಕಾವ್ಯ ಪರಂಪರೆ ಮತ್ತು ಪರಿಕಲ್ಪನೆಗಳು, ಮೌಖಿಕ ಸಾಹಿತ್ಯ ಮತ್ತು ಸಂಘರ್ಷದ ನೆಲೆಗಳ ಮೂಲಕ ಕಾಡುಗೊಲ್ಲರ ಕುಲಕಥನದ ಅಸ್ಮಿತೆಯನ್ನು ಶೋಧಿಸುವ ಪ್ರಯತ್ನ ಕೃತಿಯಲ್ಲಿದೆ. ಮೀಸಲಾತಿ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಸಂಗತಿಗಳತ್ತ ಗಮನಸೆಳೆಯುತ್ತದೆ.

ನಮ್ಮ ಅಭಿವೃದ್ಧಿ ಕಥನಗಳ ಸ್ವರೂಪ ಯಾವ ಬಗೆಯದಾಗಿರಬೇಕು ಎನ್ನುವುದಕ್ಕೆ ಸೂಚನೆಯ ರೂಪದಲ್ಲೂ ಮಲ್ಲಿಕಾರ್ಜುನರ ಕೃತಿ ಮುಖ್ಯವೆನ್ನಿಸುತ್ತದೆ. ಅಪಾರ ಮಾಹಿತಿ ಹಾಗೂ ಆ ಮಾಹಿತಿಯನ್ನು ಅಚ್ಚುಕಟ್ಟಾಗಿ ಜೋಡಿಸಿ, ನಿರೂಪಿಸಿರುವ ಕಾರಣದಿಂದಲೂ ಕೃತಿ ಗಮನಸೆಳೆಯುತ್ತದೆ.

**ಲೇ: ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ; ಪು: 490; ಬೆ: ₹ 600; ಪ್ರ: ಗೀತಾಂಜಲಿ ಪ್ರಕಾಶನ, ಶಿವಮೊಗ್ಗ. ಫೋನ್: 9449886390.**